Form No.4 (Civil) Deposition Sheets (R.P.No.57)

# ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಯಾದಗಿರಿ

## ಎಸ್.ಸಿ. ಸಂಖ್ಯೆ: 4/2024

ಪ್ರಾ.ಸಾ. 2 ಚಾ.ಸಾ 1

| | | |
|---|---|---|
| ಹೆಸರು | : | ಶ್ರೀದೇವಿ |
| ಗಂಡನ ಹೆಸರು | : | ಸಿದ್ದಪ್ಪ |
| ವಯಸ್ಸು | : | 30 ವರ್ಷ |
| ಉದ್ಯೋಗ | : | ಒಕ್ಕಲುತನ |
| ವಾಸ | : | ಬಬಲಾದ |

## ಪ್ರಮಾಣ ವಚನ ಭೋಧಿಸಿದ ದಿನಾಂಕ: 04-04-2026
## ಮುಖ್ಯ ವಿಚಾರಣೆ ಸರಕಾರಿ ಅಭಿಯೋಜಕರಿಂದ

ಚಾಸಾ-10 ನನ್ನ ಗಂಡ ಆಗಿರುತ್ತಾನೆ. ಚಾಸಾ-11 ನನ್ನ ಅತ್ತೆ ಆಗಿರುತ್ತಾರೆ. ಮೃತ ಸಂಗೀತಾ ಇವರು ನನ್ನ ಮಗಳು ಆಗಿರುತ್ತಾಳೆ. ನ್ಯಾಯಾಲಯದ ಮುಂದೆ ಇರುವ ಆರೋಪಿತಳು ನನ್ನ ಸೌತಿ ಆಗಿರುತ್ತಾಳೆ.

2. ಚಾಸಾ-10 ರವರೊಂದಿಗೆ ನನ್ನ ಮದುವೆ ಸುಮಾರು 16-17 ವರ್ಷಗಳ ಹಿಂದೆ ಆಗಿರುತ್ತದೆ. ನನ್ನ ಮದುವೆ ಆದ 8-9 ವರ್ಷಕ್ಕೆ ನನಗೆ ಮಗು ಜನಿಸಿರುತ್ತೆದೆ. ಆ ಮಗುವಿಗೆ ಸಂಗೀತಾ ಎಂದು ಹೆಸರು ಇಟ್ಟಿದ್ದೇವು. ಸಂಗೀತಾ ಜನಿಸುವುದಕ್ಕಿಂತ ಪೂರ್ವದಲ್ಲಿ ಆರೋಪಿತಳ ಮದುವೆ ಚಾಸಾ-10 ರವರೊಂದಿಗೆ ಆಗಿತ್ತು. ನನ್ನ ಮಗಳು ಸಂಗೀತಾ ಸುಮಾರು ಒಂದುವರೆ ವರ್ಷದ ಹಿಂದೆ ಜ್ವರ ಬಂದು ಮೃತಪಟ್ಟಿರುತ್ತಾಳೆ. ಆರೋಪಿತಳ ಮೇಲೆ ನಾನು ದೂರು ಕೊಟ್ಟಿರುವುದಿಲ್ಲ. ಸದರಿ ದೂರನ್ನು ಸಾಕ್ಷಿದಾರರಿಗೆ ತೋರಿಸಲಾಗಿದುದ ನೋಡಿ ಗುರುತಿಸಿದ್ದು ಅದನ್ನು **ನಿ.ಪಿ.7** ಎಂದು

ಸಾಕ್ಷಿದಾರರ ಸಹಿಯನ್ನು **ನಿ.ಪಿ.7(ಎ)** ಎಂದು ಗುರುತಿಸಲಾಯಿತು. ಈ ಕೇಸಿನ ಬಗ್ಗೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ. ಪೊಲೀಸರು ಮುಂದೆ ನಾನು ಯಾವುದೇ ಪುರವಣಿ ಹೇಳಿಕೆಗಳನ್ನು ಕೊಟ್ಟಿರುವುದಿಲ್ಲ. ಪೊಲೀಸರು ನನ್ನನ್ನು ಯಾವುದೇ ಸ್ಥಳಗಳಿಗೆ ಕರೆದುಕೊಂಡು ಹೋಗಿ ಪಂಚನಾಮೆಗಳನ್ನು ಮಾಡಿರುವುದಿಲ್ಲ. ನನ್ನನ್ನು ಮಾನ್ಯ ನ್ಯಾಯಾಲಯಕ್ಕೆ ಕರೆದುಕೊಂಡು ಹೋಗಿ ಯಾವುದೇ ಹೇಳಿಕೆ ಪಡೆದುಕೊಂಡಿರುವುದಿಲ್ಲ. ಸಾಕ್ಷಿದಾರರಿಗೆ ಈಗ ಕಲಂ 164 ದಂಡ ಪ್ರಕ್ರಿಯಾ ಸಂಹಿತೆ ರಡಿಯಲ್ಲಿ ಹೇಳಿಕೆಯನ್ನು ತೋರಿಸಲಾಗಿದ್ದು ಅದನ್ನು **ನಿ.ಪಿ.8** ಎಂದು ಸಾಕ್ಷಿದಾರರ ಸಹಿಯನ್ನ **ನಿ.ಪಿ.8(ಎ), 8(ಬಿ), 8(ಸಿ)** ಎಂದು ಗುರುತಿಸಲಾಯಿತು.

(**ಈ ಸಂದರ್ಭದಲ್ಲಿ ಮಾನ್ಯ ಪಿಪಿರವರು ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಬೇಕೆಂದು ಕೋರಿರುತ್ತಾರೆ**, **ಅನುಮತಿ ನೀಡಲಾಗಿದೆ**.)

**<u>ಪಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದಃ</u>**

3. ನನಗೆ ಮಗಳು ಜನಿಸಿದ್ದರಿಂದ ಆರೋಪಿತಳು ನನ್ನ ಮೇಲೆ ಹೊಟ್ಟೆ ಕಿಚ್ಚು ಉಂಟು ಆಗಿ ವಿನಾಃ ಕಾರಣ ಜಗಳವಾಡುತ್ತಿದಳು ಎಂದರೆ ಸರಿಯಲ್ಲ.

4. ದಿಃ 30.08.2023 ರಂದು ಬೆಳಿಗ್ಗೆ 9.00 ಗಂಟೆಗೆ ನಾನು ಹಾಗೂ ಚಾಸಾ-11 ರಿಂದ 13 ರವರು ಮನೆಯಲ್ಲಿ ಮಾತಾನಾಡುತ್ತಾ ಕುಳಿತಿದ್ದೇವು ಎಂದರೆ ಸರಿಯಲ್ಲ. ಆಗ ನನ್ನ ಮಗಳು ಸಂಗೀತಾಳಿಗೆ ಹಾಲು ಕುಡಿಸಬೇಕು ಎನ್ನುವಷ್ಟರಲ್ಲಿ ಆರೋಪಿಳು ಬಂದು ಹಾಲು ಕೊಡು ನನ್ನ ಮಗಳಿಗೆ ಕುಡಿಸುತ್ತೇನೆ ಎಂದು ಹೇಳಿ ನನ್ನ ಕೈಯಲ್ಲಿ ಇದ್ದ ಬಾಟಲಿಯನ್ನು ಹಾಗೂ ನನ್ನ ಮಗಳನ್ನು ತೆಗೆದುಕೊಂಡು ಮನೆಯ ಹಿಂದಿನ ಕೋಣೆಗೆ ಹೋಗಿ ಬಾಗಿಲನ್ನು ಮುಚ್ಚಿಕೊಂಡಳು ಎಂದರೆ ಸರಿಯಲ್ಲ. ಸುಮಾರು 20-30

ನಿಮಿಷಗಳ ನಂತರ ಮನೆಯ ಬಾಗಿಲನ್ನು ತೆಗೆದು ಹೊರಗೆ ಬಂದಳು ಎಂದರೆ ಸರಿಯಲ್ಲ. ಮಧ್ಯಾಹ್ನ 3.00 ಸುಮಾರಿಗೆ ನನ್ನ ಮಗಳು ಸಂಗೀತಾ ಇವಳು ಅಳುತ್ತಿದ್ದು ಬಾಯಿಂದ ಬುರುಗು ಬಂದಿದ್ದು ಈ ವಿಷಯವನ್ನು ಚಾಸಾ-10, 11 ಹಾಗೂ ಆರೋಪಿತಳಿಗೆ ತಿಳಿಸಿದೇನು ಎಂದರ ಸರಿಯಲ್ಲ. ನನ್ನ ಮಗಳನ್ನು ಚಿಕಿತ್ಸೆಗಾಗಿ ಯಾದಗಿರಿ ಆಸ್ಪತ್ರೆಗೆ ಕರೆದುಕೊಂಡು ಹೋಗುತ್ತಿದ್ದಾಗ ಮಾರ್ಗ ಮಧ್ಯೆದಲ್ಲಿ ಮೃತಪಟ್ಟಲು ಎಂದರೆ ಸರಿಯಲ್ಲ. ಆರೋಗ್ಯವಾಗಿ ಇದ್ದ ನನ್ನಮಗಳು ಏಕಾಏಕಿ ಮೃತಪಟ್ಟಿದ್ದರಿಂದ ಆರೋಪಿತಳ ಮೇಲೆ ನನಗೆ ಸಂಶಯ ಇತ್ತು ಎಂದರೆ ಸರಿಯಲ್ಲ.

5. ದಿಃ 31.08.2023 ರಂದು ಸದರಿ ವಿಷಯದ ಕುರಿತು ನ್ಯಾಯಾ ಪಂಚಾಯಿತಿ ಮಾಡಿ ಆರೋಪಿತಳಿಗೆ ವಿಚಾರಿಸಲಾಗಿ ನನ್ನ ಮಕ್ಕಳ ಪಾಲಿಗೆ ಬರಬೇಕಾದ ಗಂಡನ ಆಸ್ತಿಯಲ್ಲಿ ಸಂಗೀತಾಳಿಗೆ ಆಸ್ತಿ ಪಾಲು ಹೋಗುತ್ತದೆ ಎಂದು ದುರುದ್ದೇಶದಿಂದ ಹತ್ತಿ ಬೆಳೆಗೆ ಹೊಡೆಯುಲು ಕ್ರಿಮಿನಾಶಕ ಬಾಟಲಿಯನ್ನು ತೆಗೆದುಕೊಂಡು ಹಾಲಿನ ಬಾಟಲಿನಲ್ಲಿ ಹಾಕಿ ಸಂಗೀತಾಳಿಗೆ ಕುಡಿಸಿರುತ್ತೇನೆ ಎಂದು ಆರೋಪಿತಳು ಒಪ್ಪಿಕೊಂಡಳು ಎಂದರೆ ಸರಿಯಲ್ಲ. ಈ ಕುರಿತು ನಾನು ನಿ.ಪಿ.7 ರಂತೆ ದೂರು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

6. ಫಿರ್ಯಾದಿಗೆ ಪೂರಕವಾಗಿ ದಿಃ 01.09.2023 ಹಾಗೂ ದಿಃ 05.09.2023 ರಂದು ಪುರವಣಿ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಸದರಿ ಪುರವಣಿಗಳನ್ನು ನಿ.ಪಿ.9 ಮತ್ತು 10 ಎಂದು ಗುರುತಿಸಲಾಯಿತು.

7. ದಿಃ 15.09.2023 ರಂದು ಮಾನ್ಯ ಜೆ.ಎಮ್.ಎಫ.ಸಿ ನ್ಯಾಯಾಲಯ ಶಹಾಪೂರದಲ್ಲಿ ಘಟನೆ ಕುರಿತು ನಿ.ಪಿ.8 ರಂತೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ.

8. ದಿಃ 01.09.2023 ಬೆಳಿಗ್ಗೆ 8.00-10.00 ಗಂಟೆಯವರೆಗೆ ಚಾಸಾ-2 ಮತ್ತು 3 ರವರ ಸಮಕ್ಷಮ ನಾನು ಸ್ಥಳ ತೋರಿಸಿದಂತೆ ನಮ್ಮ ಮನೆಯಲ್ಲಿ ಸ್ಥಳ ಪಂಚನಾಮೆ ಮಾಡಿರುತ್ತಾರೆ ಎಂದರೆ ಸರಿಯಲ್ಲ.

9. ದಿಃ 01.09.2023 ರಂದು ಮಧ್ಯಾಹ್ನ 12.00-1.00 ಗಂಟೆಯವರೆಗೆ ನಾನು ಸ್ಥಳ ತೋರಿಸಿದಂತೆ ಚಾಸಾ-4 ಮತ್ತು 5 ರವರ ಸಮಕ್ಷಮ ನನ್ನ ಮಗಳು ಶವ ಉತ್ತಿಟ್ಟ ಸ್ಥಳದ ಪಂಚನಾಮೆಯನ್ನು ಮಾಡಿರುತ್ತಾರೆ ಎಂದರೆ ಸರಿಯಲ್ಲ.

10. ದಿಃ 05.09.2023 ರಂದು ಸಾಯಂಕಾಲ 6.15-7.00 ಗಂಟೆವರೆಗೆ ಚಾಸಾ-6 ಮತ್ತು 7 ರವರ ಸಮಕ್ಷಮ ನಾನು ತೋರಿಸಿದಂತೆ ಮೃತ ಶವವನ್ನು ಅಂತ್ಯಕ್ರಿಯೆ ಮಾಡಿದ ಸ್ಥಳದ ಪಂಚನಾಮೆಯನ್ನು ಮಾಡಿರುತ್ತಾರೆ ಎಂದರೆ ಸರಿಯಲ್ಲ.

11. ಸದರಿ ವಿಷಯ ನನಗೆ ಎಲ್ಲಾ ವಿಷಯಗೊತ್ತಿದ್ದರು ಸಹ ಆರೋಪಿತಳೊಂದಿಗೆ ರಾಜಿ ಆಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲು ಆರೋಪಿತರ ಪರವಾಗಿ ಶ್ರೀ. ಡಿ.ವಿ. ವಕೀಲರಿಂದ</u>

- ಪಾಟೀ ಸವಾಲು ಇಲ್ಲವೆಂದು ನುಡಿದಿರುತ್ತಾರೆ.

<u>ಮರುವಿಚಾರಣೆಃ-ಇಲ್ಲ</u>

(ನನ್ನ ಉಕ್ತ ಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓ.ಹೇ.ಕೆ.ಸ. ಇದೆ.

ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ಯಾದಗಿರಿ.

Form No.4 (Civil) Deposition Sheets (R.P.No.57)

# ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಯಾದಗಿರಿ

## ಎಸ್.ಸಿ. ಸಂಖ್ಯೆ: 4/2024

ಪ್ರಾ.ಸಾ. 3 ಚಾ.ಸಾ 5

| | | |
|---|---|---|
| ಹೆಸರು | : | ಸೋಮರಾಯ |
| ತಂದೆಯ ಹೆಸರು | : | ಬೀರಪ್ಪ |
| ವಯಸ್ಸು | : | 49 ವರ್ಷ |
| ಉದ್ಯೋಗ | : | ಕೂಲಿ ಕೆಲಸ |
| ವಾಸ | : | ಬೀರನಹಾಳ |

ಪ್ರಮಾಣ ವಚನ ಭೋಧಿಸಿದ ದಿನಾಂಕ: 04-04-2026
ಮುಖ್ಯ ವಿಚಾರಣೆ ಸರಕಾರಿ ಅಭಿಯೋಜಕರಿಂದ

ನನಗೆ ಚಾಸಾ-1 ರವರ ಪರಿಚಯ ಇರುತ್ತದೆ. ಚಾಸಾ-4 ರವರ ಪರಿಚಯ ಇರುತ್ತದೆ. ನಮ್ಮ ಸಮಕ್ಷಮ ಯಾವುದೇ ಪಂಚನಾಮೆ ಮಾಡಿರುವುದಿಲ್ಲ. ಸುಮಾರು 2 ವರ್ಷಗಳ ಹಿಂದೆ ಬಂದು ದಾಖಲೆಗೆ ನನ್ನ ಸಹಿ ಪಡೆದುಕೊಂಡಿರುತ್ತಾರೆ. ಸದರಿ ದಾಖಲೆ ಪಂಚನಾಮೆಯನ್ನು ನೋಡುತ್ತಿದ್ದು ಅದನ್ನು ಈಗಾಗಲೇ ನಿ.ಪಿ.1 ಎಂದು ಸಾಕ್ಷಿದಾರರ ಸಹಿಯನ್ನು **ನಿ.ಪಿ.1(ಬಿ)** ಎಂದು ಗುರುತಿಸಲಾಯಿತು. ಆ ಕಾಲಕ್ಕೆ ಒಟ್ಟು ಐದು ಭಾವಚಿತ್ರಗಳನ್ನು ತೋರಿಸಿದ್ದು ಅದರಲ್ಲಿ ಇರುವುದನ್ನು ನುಡಿದಿರುತ್ತಾರೆ. ಸದರಿ ಭಾವಚಿತ್ರಗಳನ್ನು ಈಗಾಗಲೇ ನಿ.ಪಿ.2 ರಿಂದ 6 ಎಂದು ಗುರುತಿಸಲಾಯಿತು. ನಿ.ಪಿ.2 ರಿಂದ 6 ಅನ್ನು ಯಾವ ಕಾರಣಕ್ಕಾಗಿ ಮತ್ತು ಎಲ್ಲಿ ತೆಗೆದಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ.

**(ಈ ಸಂದರ್ಭದಲ್ಲಿ ಮಾನ್ಯ ಪಿಪಿರವರು ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು**

**ಅನುಮತಿ ನೀಡಬೇಕೆಂದು ಕೋರಿರುತ್ತಾರೆ, ಅನುಮತಿ ನೀಡಲಾಗಿದೆ.)**

**<u>ಪಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದಃ</u>**

2. ದಿಃ 01.09.2023 ರಂದು ಮಧ್ಯಾಹ್ನ 12.00-1.00 ಗಂಟೆಯವರೆಗೆ ನನ್ನನ್ನು ಹಾಗೂ ಚಾಸಾ-4 ಚಾಮನಹಳ್ಳಿ ಗ್ರಾಮದ ಸಣ್ಣಶರಣಪ್ಪ ಸಾವೂರು ಇವರ ಹೊಲದ ಗದ್ದೆಯ ಪಕ್ಕದಲ್ಲಿ ಇರುವ ಹಳ್ಳದ ದಂಡೆಯಲ್ಲಿ ಕರೆದುಕೊಂಡು ಹೋಗಿದ್ದರು ಎಂದರೆ ಸರಿಯಲ್ಲ. ಅಲ್ಲಿ ಚಾಸಾ-1 ರವರು ಹಾಜರು ಇದ್ದು ಆರೋಪಿತಳು ತನ್ನ ಮಗಳ ಶವವನ್ನು ಹೊತ್ತಿಟ್ಟ ಸ್ಥಳವನ್ನು ತೋರಿಸಿದ ಮೇರೆಗೆ ಪಂಚನಾಮೆ ಮಾಡಿ ಬರೆದು ಓದಿ ಹೇಳಿದ ಮೇರೆಗೆ ನಾನು ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಸ್ಥಳದಲ್ಲಿ ನಿ.ಪಿ.2 ರಿಂದ 6 ರವರೆಗೆ ಭಾವಚಿತ್ರ ಪಡೆದಿರುತ್ತಾರೆ ಎಂದರೆ ಸರಿಯಲ್ಲ.

3. ನನಗೆ ಎಲ್ಲಾ ವಿಷಯಗೊತ್ತಿದ್ದರು ಸಹ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲು ಆರೋಪಿತರ ಪರವಾಗಿ ಶ್ರೀ. ಡಿ.ವಿ. ವಕೀಲರಿಂದ</u>

- ಪಾಟೀ ಸವಾಲು ಇಲ್ಲವೆಂದು ನುಡಿದಿರುತ್ತಾರೆ.

<u>ಮರುವಿಚಾರಣೆಃ-ಇಲ್ಲ</u>

(ನನ್ನ ಉಕ್ತ ಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓ.ಹೇ.ಕೆ.ಸ. ಇದೆ.

ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ಯಾದಗಿರಿ.